# ಸಂಗಂ ಸಾಹಿತ್ಯದ ಕಾಲ

ಸಂಗಂ ಸಾಹಿತ್ಯ ಕೆಳಗೆ ನೀಡಿರುವಂತೆ ಹಲವಾರು ಹಂತಗಳಲ್ಲಿ ಹರಿದುಬಂದಿದೆಯೆಂಬುದು ಕಮಿಲ್ ಝ್ವುಲೆಬಿಲ್‌ರವರ ಅಭಿಪ್ರಾಯ.

1. ಮೌಖಿಕವಾದ ಸಾಹಿತ್ಯ ಸಂಯೋಜನೆ.
2. ಮೌಖಿಕ ಸಾಹಿತ್ಯದ ಪ್ರಚಾರ.
3. ಸಾಹಿತ್ಯದ ಲಿಪಿಕರಣ
4. ಲಿಪಿಕರಣಗೊಳಿಸಿದ ಸಾಹಿತ್ಯದ ವರ್ಗೀಕರಣ ಮತ್ತು ಸಂಪಾದನೆ
5. ಸಾಹಿತ್ಯದ ಮೇಲೆ ಟೀಕೆ, ವಿಮರ್ಶೆ, ವಿಮರ್ಶೆಯ ಮೇಲೆ ವಿಮರ್ಶೆ.

ಪ್ರಾಚೀನ ತಮಿಳಗಂನಲ್ಲಿ ಬರಹದ ವ್ಯಾಪ್ತಿ ಮತ್ತು ಉದ್ದೇಶ ಏನಾಗಿರಬಹುದು ? ಅದು ಯಾವ ಮಟ್ಟಿಗೆ ಸಾಹಿತ್ಯ ರಚನೆಯಲ್ಲಿ ಬಳಕೆಯಾಗಿರಬಹುದೆಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಉತ್ತರವಾಗಿ ಮೂಲತಃ ವೃತ್ತಿಗಾಯಕರ ಕವಿತೆಗಳು ಆರಂಭದಲ್ಲಿ ಮೌಖಿಕವಾಗಿದ್ದು ಪ್ರಾಚೀನ ಛಂದಸ್ಸುಗಳಲ್ಲಿದ್ದು ಕಾಲಾನುಕ್ರಮದಲ್ಲಿ ಲಿಪಿಗೊಂಡಿರುವ ಸಾಧ್ಯತೆಗಳು ದಟ್ಟವಾಗಿವೆ. ತಮಿಳಗಂನ ಆರಂಭಿಕ ಶಿಲಾಶಾಸನಗಳನ್ನು ಗಮನಿಸಿದಾಗ ಬರವಣಿಗೆ ವಾಣಿಜ್ಯ ಹಾಗೂ ಆಡಳಿತದಲ್ಲಿ ಅತ್ಯಂತ ಸಣ್ಣ ಪ್ರಮಾಣದಲ್ಲಿ ಬಳಕೆಯಾಗಿದ್ದು, ಸಾಹಿತ್ಯ ಮತ್ತು ವಿಸ್ತೃತ ಸಾಹಿತ್ಯಕ ಚಟುವಟಿಕೆಗಳಿಗೆ ಬಳಕೆಯಾಗಿರಲಿಲ್ಲವೆಂದು ಭಾವಿಸಬಹುದು.

ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದಲ್ಲಿ ತಮಿಳಗಂನ ಆರಂಭ ಕಾಲದ ಚರಿತ್ರೆಯನ್ನು ಸಂಗಂ ಸಾಹಿತ್ಯದ ಆಧಾರದ ಮೇಲೆ ರಚಿಸಲಾಯಿತು. ಈ ಸಂದರ್ಭದಲ್ಲಿ ಸಂಗಂ ಸಾಹಿತ್ಯದ ಮೂಲ, ಅದರ ಬರವಣಿಗೆಯ ಸ್ವರೂಪದ ಬಗೆಗೆ ಯಾವುದೇ ಒಳನೋಟಗಳಿಗೆ ಅವಕಾಶಗಳಾಗಲಿಲ್ಲ. ಆದರೆ ಕೆ.ಕೈಲಾಸಪತಿಯವರು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸಂಗಂ ಸಾಹಿತ್ಯದಲ್ಲಿನ ಸಿದ್ಧ ಮಾದರಿ , ಸಿದ್ಧಗೊಂಡ ವರ್ಣನೆ, ಪರಿಕಲ್ಪನೆಗಳ ಪುನರುಕ್ತಿಗಳನ್ನು ಪರಿಗಣಿಸಿ ಅದು ಮೌಖಿಕ ಪರಂಪರೆಯದೆಂದು ಖಚಿತವಾಗಿ ಸಾರಿದರು.

ಪದಿರುಪ್ಪತ್ತು ಹಾಗೂ ಎಟ್ಟುತ್ತೊಕ್ಕೈ ತಮಿಳಗಂನ ಸಹಜ ಕಾಲಕ್ಕೆ ಸೇರಿದವಾಗಿವೆ. ಈ ಕೃತಿಗಳಲ್ಲಿನ ಕವಿತೆಗಳು ವಿಭಿನ್ನ ಕವಿಗಳಿಂದ, ವಿಭಿನ್ನ ಸ್ಥಳಗಳಲ್ಲಿ ವಿಭಿನ್ನ ಕಾರಣಗಳಿಂದ, ವಿಭಿನ್ನ ರಾಜರ ಸಾಮಂತರ ಆಶ್ರಯದಲ್ಲಿ ರೂಪುಗೊಂಡಿವೆ. ಇಲ್ಲಿರುವ ಸಾಹಿತ್ಯ ಸಮಕಾಲೀನವಾದುದಾಗಿರದೆ ಹಲವಾರು ತಲೆಮಾರುಗಳಲ್ಲಿ ಹರಿದು ಬಂದಿದೆ. ರಾಜರ, ಆಶ್ರಯದಾತರ ಎದುರಿನಲ್ಲಿ ಹಾಡುವ ಮೌಖಿಕ ಸಂಪ್ರದಾಯವಿರಬಹುದು. ನಂತರ ಇವನ್ನು ಲಿಪಿಗೊಳಿಸಿರಬಹುದು. ಆದರೆ ಮೊದಲಿಗೆ ಇವುಗಳನ್ನು ಯಾರು ಲಿಪಿಗೊಳಿಸಿದರೆಂದು ತಿಳಿಯದು.

ಸಾಹಿತ್ಯದ ಸಂಗ್ರಹ , ಲಿಪಿಕರಣ, ಸಂಕಲನ ಮತ್ತು ವರ್ಗೀಕರಣದ ಕಾಲ

ಜಗತ್ತಿನಾದ್ಯಂತ ಮೌಖಿಕ ಸಾಹಿತ್ಯ ಸಂಪ್ರದಾಯದ ಸಾಹಿತ್ಯದಲ್ಲಿ ಒಂದೇ ಬಗೆಯ ಎದ್ದು ಕಾಣುವ ಅಂಶಗಳು ದಾಖಲಾಗಿವೆ. ಸಿದ್ಧ ವಾಕ್ಯಗಳು, ವಿವರಣೆಗಳು, ವಚನಗಳ ಪುನರುಕ್ತಿ, ನೆನಪಿಡಲು

ಅನುಕೂಲವಾಗುವಂತಹ ಜೋಡಣೆ ಮೌಖಿಕ ಸಂಪ್ರದಾಯದ ಕುರುಹು. ಪುರಂ ಕವಿತೆಗಳಲ್ಲಿ ಇವೆಲ್ಲವು ಮೇಳೈಸಿದ್ದು ಅದು ಮೌಖಿಕ ಗಾಯಕ ಸಂಪ್ರದಾಯವೆಂದು ಖಚಿತವಾಗುತ್ತದೆ. ಸಂಗಂ ಸಾಹಿತ್ಯದ ಕವಿಗಳು ಸಿದ್ದ ಮಾದರಿಗಳನ್ನು  ಯಥೇಚ್ಚವಾಗಿ ಬಳಸಿದ್ದಾರೆ. ಆದರೂ ಇದರಲ್ಲಿ ವೈಯುಕ್ತಿಕ ಪ್ರತಿಭೆ , ಸಾಮರ್ಥ್ಯಕ್ಕೂ ಅವಕಾಶ ದಕ್ಕಿದೆ.  ಅಹಂ ಸಾಹಿತ್ಯದಲ್ಲಿ ಬಳಸಿದ ಆಚಿರಿಯಂ ಛಂದಸ್ಸು ಮತ್ತು ಭಾಷೆಯಲ್ಲಿ ಆಂತರಿಕ ಏಕರೂಪತೆ ಎದ್ದು ಕಾಣುತ್ತದೆ. ಪುರಂ ಸಾಹಿತ್ಯದಲ್ಲಿ ಪದ್ಯ ಮತ್ತು ಗದ್ಯಗಳ ಮಿಶ್ರಣವಿದ್ದು ವಂಜಿ,  ಆಚಿರಿಯಂ ಛಂದಸ್ಸುಗಳು ಎದ್ದು ಕಾಣುತ್ತವೆ. ಮೌಖಿಕವಾದ ಸಾಹಿತ್ಯವನ್ನು ಲಿಪಿಗೊಳಿಸಹೊರಟಾಗ ಎದ್ದ ಕೊರತೆಯನ್ನು ತುಂಬಿಸಿಕೊಳ್ಳಲು ಈ ತಂತ್ರಕ್ಕೆ ಮೊರೆಹೋಗಿರುವ ಸಾಧ್ಯತೆಗಳಿವೆ.

ಉನ್‌ಪೆಯೇಟಿಪಸುಂ, ಕುಡ್ಡೈಯಾರ್, ಇಡುಂಪಿಡರ್ತಲೈವಾರ್, ಕಳತ್ತಲೈವಾರ್, ಕಳೈತಿನಿಯಾಣಯರ್, ಕಾಕ್ಕೈಪಾಟಿನಿಯಾರ್, ಕುಂಟುಕಪಾಲಿಯಾತನ್, ನರಿವೆರುತ್ತಲೈವಾರ್, ನಳ್ಳಿ, ಕಿಳ್ಳಿ, ಪಾರಿ, ಕಾರಿ, ಎಳಿನಿ, ಎವ್ವಿ, ಅವನ್, ಅಲಿಸಿ, ಕಂಕನ್, ಕಿತ್ತಿ, ಚೆಂಪುಲಪ್ಪೆಯನೀರಾರ್ (ಕೆಂಪು ಮಣ್ಣು ಮಳೆ ನೀರಿನವನು), ಅಣಿಲಾಡು ಮುನ್ರಿಲಾರ್ (ಅಣಿಲಾಡುವ ಮನೆಯವನು) , ಕಲ್ಪೊರುಚಿರುನೂರೈಯರ್(ಕಲ್ಲಿನಕೆನೆಯವನು),  ನೆಡುವೆಣ್ಣಿಲವಿನಾರ್(ದೀರ್ಘ ಬೆಳದಿಂಗಳಿನವನು), ವಿಟ್ಟಕುದುರೈಯನಾರ್(ಬಿಟ್ಟ ಕುದುರೆಯವನು),  ಉರೈಯೂರು ಮುದುಕೊರ್ರನ್( ಉರೈಯೂರಿನ ಮುದಿಗಾರೆಯವನು),  ಒಟನಾಣಿ(ಒದುವ ಕುಶಲಿ),  ಪಾಳೈಪಾಟಿಯಪೆರುಮಕಡುಂಗೋ(ಪಾಳೈ ಹಾಡಿದ ದೊಡ್ಡ ರಾಜ),  ಪೆರುಂತಲೈ ಚಾತ್ತನಾರ್(ದೊಡ್ಡತಲೆ ಚಾತ),  ಪುರಿಗಣ್ಣನ್(ಹಸಿರುಗಣ್ಣಿನವನು) , ಕಾವಪೆಣ್ಣು(ಕಾವಲಿನ ಹೆಂಗಸು),  ಕಾಮಕ್ಕಣ್ಣಿಯಾರ್(ಬಯಕೆಗಣ್ಣಿನವಳು-ಕಾಮಾಕ್ಷಿ)ಯಂತಹ ವಿಚಿತ್ರ ಹೆಸರಿನ ಕವಿಗಳು ಸಂಗಂ ಸಾಹಿತ್ಯದಲ್ಲಿದ್ದಾರೆ. ಮೌಖಿಕರೂಪದಲ್ಲಿ ದಕ್ಕಿದ ಕವಿತೆಗಳ ಮೂಲ ಕೃತಿಕಾರರು ತಿಳಿಯದಿದ್ದಾಗ ಸಂಕಲನಕಾರರು ಇಂತಹ ವಿಚಿತ್ರ ಹೆಸರುಗಳಿಗೆ ಮೊರೆಹೋಗಿರುವ ಸಾಧ್ಯತೆಗಳಿವೆ. ಚೆಂಪುಲಪ್ಪೆಯನೀರಾರ್ ಬರೆದ ಕವಿತೆ ಚೆಂಪುಲಪ್ಪೆಯನೀರ್ ಎಂಬ ಶಬ್ದದೊಂದಿಗೆ ಪ್ರಾರಂಭವಾಗುತ್ತದೆ. ಅದರಂತೆ ಅಣಿಲಾಡು ಮುನ್ರಿಲ್ ಎಂದು ಪ್ರಾರಂಭವಾಗುವ ಕವಿತೆಯನ್ನು ಬರೆದವನು ಅಣಿಲಾಡು ಮುನ್ರಿಲಾರ್ ಎಂದು ಹೇಳಲಾಗಿದೆ. ಇವುಗಳನ್ನು ಗಮನಿಸಿದ ಪ್ಯಾರಿಸ್‌ನಲ್ಲಿದ್ದ ಖ್ಯಾತ ತಮಿಳು ವಿದ್ವಾಂಸ ಜೂಲಿಯನ್ ವಿನ್ಸನ್ ಇಡೀ ಸಂಗಂ ಸಾಹಿತ್ಯ ಕೃತ್ರಿಮವೆಂದು ತಿರಸ್ಕರಿಸಿದ್ದನು.

ಕೃತಿ ಅಥವಾ ಕೃತಿಗಾರನ ಹೆಸರು ತಿಳಿಯದಿದ್ದಾಗ ಅದನ್ನು ಅಜ್ಞಾತವೆಂದು ಕರೆಯುವ ವಾಡಿಕೆಯಿದೆ. ಆದರೆ ಕೃತಿಯ ಹೆಸರು ತಿಳಿಯದಿದ್ದಾಗ ಅದನ್ನು ಕೃತಿಗಾರನ ಹೆಸರಿನಲ್ಲು ,  ಕೃತಿಗಾರನ ಹೆಸರು ತಿಳಿಯದಿದ್ದಾಗ ಕೃತಿಯ ಹೆಸರಿನಿಂದಲು ಗುರುತಿಸುವ ಸಂಪ್ರದಾಯ ತಮಿಳಿನಲ್ಲಿ ಇರುವಂತೆ ಕಾಣುತ್ತದೆ.

ಕಲಿತ್ತೊಗೈಯನ್ನು ಪರಿಷ್ಕರಿಸಿ ಪ್ರಕಟಿಸಿದ ಸಿ.ಡಬ್ಲ್ಯು. ದಾಮೋದರ ಪಿಳ್ಳೈಯವರು ಈ ಕೃತಿಯ ತಂತ್ರ, ಭಾವ,  ರಸಾವೇಶಗಳನ್ನು ಅಭ್ಯಸಿಸಿ ಇದು ನಲ್ಲಂತುವನಾರ್ ಎಂಬ ಏಕವ್ಯಕ್ತಿಯಿಂದ ರಚಿತವಾಗಿದೆಯೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಪರಿಪಾಡಲ್ ಮತ್ತು ಕಲಿತ್ತೊಗೈ ಪ್ರ.ಶ 4-6 ಶತಮಾನದ ಅವಧಿಯದೆಂದು ಕಮಿಲ್ ಝ್ವೆಲೆಬಿಲ್ ಅಭಿಪ್ರಾಯ ಪಟ್ಟಿದ್ದಾರೆ. ಇದು ಸಂಗಂ ಸಾಹಿತ್ಯವನ್ನು ಕಳಭ್ರರ ಕಾಲಕ್ಕೆ ತಂದು ನಿಲ್ಲಿಸುತ್ತದೆ.

ಸಂಗಂ ಸಾಹಿತ್ಯದ ಏಕರೂಪತೆ ಮತ್ತು ಅದರ ಸ್ವರೂಪದ ಸಾಮಾನ್ಯತೆ ಭಾಷೆಯ ಏಕರೂಪತೆಗೂ ಕಾರಣವಾಗಿದೆ. ಸಂಗಂ ಸಾಹಿತ್ಯದ ಮೂಲದಲ್ಲಿದ್ದ ವೃತ್ತಿಗಾಯಕ ಕಾವ್ಯದ ಭಾಷಾಸ್ವರೂಪವನ್ನು ಲಿಪಿಕರಣ ಮತ್ತು ಸಂಕಲನದ ಕಾಲದಲ್ಲಿ ಶಿಷ್ಟಗೊಳಿಸಲಾಗಿದ್ದು ಸಾಂಪ್ರದಾಯಿಕ ಭಾಷೆ ಹಾಗೂ ಸೂತ್ರಬದ್ದತೆ ಸಾಮಾನ್ಯೀಕೃತ ಚೌಕಟ್ಟಿಗೆ ಒಳಪಡಿಸಲಾಗಿದೆ.

ಸಂಗಂ ಸಾಹಿತ್ಯ ಕ್ರಿ, ಶ. ಆದಿಯಿಂದ ಪ್ರ.ಶ 4ನೇ ಶತಮಾನದ ಅವಧಿಯಲ್ಲಿ ಸೃಜಿತಗೊಂಡಿದ್ದು ಮೌಖಿಕ ಪರಂಪರೆಯಲ್ಲಿ ಅಸ್ತಿತ್ವದಲ್ಲಿದ್ದು ಹಲವಾರು ಶತಮಾನಗಳ ನಂತರ ಲಿಪಿಗೊಳಿಸಿ, ಸಂಗ್ರಹಿಸಿ ನಂತರ ವರ್ಗೀಕರಣಗೊಳಿಸಲಾಗಿದೆ. ಈ ಕಾರ್ಯದಲ್ಲಿ ವಿವಿಧ ಸ್ತರ ಕಾಲದಲ್ಲಿದ್ದ ಕವಿತೆಗಳು ಒಂದೇ ಇಡುಗಂಟಿನಲ್ಲಿರುವುದರಿಂದ ಇವುಗಳಲ್ಲಿ ಭಾಷಾವಿಕಸನದ ಹುಡುಕಾಟಕ್ಕೆ ಹೆಚ್ಚಿನ ಆಸ್ಪದಗಳಿಲ್ಲ.

ಇರೈಯನಾರ್ ಅಹಪೆಪ್ಪೊರುಳ್(ಇರೈನಾರ್ ಕಳವಿಯಲ್) 7-8 ನೇ ಶತಮಾನದಲ್ಲಿ ರಚಿತವಾಗಿರುವ ಸಾಧ್ಯತೆಗಳಿದ್ದು ಇದು ಅಗಂ(ಹಂ) ಮತ್ತು ಪುರಂ ಸಾಹಿತ್ಯಗಳಿಗೆ ಸೈದ್ಧಾಂತಿಕ ನಿಲುವನ್ನು ಒದಗಿಸುವ ಅತ್ಯಂತ ಪ್ರಾಚೀನ ಕೃತಿಯಾಗಿದೆ. ಇದು ತೊಲ್‌ಕಾಪ್ಪಿಯಂನ ಪೊರುಳಾದಿಗಾರಂಗಿಂತ ಹಿಂದಿನದು. ಇರೈಯಾರ್ನಿಂದ ಮೌಖಿಕವಾಗಿ ಹರಿದುಬಂದುದನ್ನು ಮುಶಿರಿಯ ನೀಲಕಂಠನ್ ಲಿಖಿತಗೊಳಿಸಿದುದನ್ನು ಹಾಗೂ ಅದರ ಮೇಲೆ ನಕ್ಕೀರಾರ್ ಟೀಕೆ ಬರೆದನೆಂದು ಸಂಪ್ರದಾಯ ಹೇಳುತ್ತದೆ. ಇದು ಕಾವ್ಯ ಸೃಜಿತಗೊಂಡ ಹಾಗೂ ಲಿಖಿತಗೊಂಡ ಕಾಲದ ಸೂಚನೆಯಾಗಿದೆ.

ಪ್ರ.ಶ. 8-10 ನೇ ಶತಮಾನದಲ್ಲಿದ್ದ ಇರೈನಾರ್‌ನ ಅಹಪ್ಪೊರುಳ್‌ಗೆ ಟೀಕೆ ಬರೆದ ನಕ್ಕೀರಾರ್ ಮೂರು ಸಂಗಂಗಳ ಐತಿಹ್ಯದ ಬಗೆಗೆ ಸುದೀರ್ಘ ವಿವರಣೆ ನೀಡುತ್ತಾನಾದರೂ ತನ್ನ ಕೃತಿಯಲ್ಲಿ ಎಲ್ಲಿಯೂ ಕವನ ಸಂಗ್ರಹಗಳ ಬಗೆಗೆ ಉಲ್ಲೇಖಿಸುವುದಿಲ್ಲ. ಇದರಿಂದ ಈ ಕಾಲದ ನಂತರವೇ ಸಂಗ್ರಹಗೊಂಡ ಮೌಖಿಕ ಸಾಹಿತ್ಯ ವಿವಿಧ ತೊಗೈಗಳಲ್ಲಿ ವರ್ಗೀಕೃತಗೊಂಡಿದೆ. ವಿಎಸ್‌ಸಿ ಪಿಳ್ಳೈಯವರು ನಕ್ಕೀರಾರ್ ಇರೈನಾರ್‌ನ ಅಗಪ್ಪೊರುಳ್‌ನ ಮೇಲಿನ ಟೀಕೆಯ ಮುಖ್ಯ ಚೌಕಟ್ಟನ್ನು ನೀಡಿರಬಹುದು. ಅದು ಮೌಖಿಕವಾಗಿ ಹರಿದುಬಂದು 10 ನೇ ಶತಮಾನದಲ್ಲಿ ನೀಲಕಂಠರಾರ್ನಿಂದ ವಿಸ್ತೃತಗೊಂಡು ಲಿಪಿಗೊಂಡಿರಬಹುದೆಂದು ಭಾವಿಸುತ್ತಾರೆ.